# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (882) 91 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11/03/2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೆಂಗಳೂರು ಹೊರವಲಯದಲ್ಲಿರುವ ನೈಸ್ ರಸ್ತೆ ಯೋಜನೆಗೆ ಸರ್ಕಾರ ಹಾಗೂ ಕಂಪನಿಯ ನಡುವೆ ಮಾಡಿಕೊಂಡಿರುವ ಒಪ್ಪಂದದ ಮುಖ್ಯ ಷರತ್ತುಗಳು ಯಾವುವು; (ಒಪ್ಪಂದದ ಅವಧಿ ಮತ್ತು ನವೀಕರಣದ ಮಾಹಿತಿ ಒದಗಿಸುವುದು) | • ಬೆಂಗಳೂರು – ಮೈಸೂರು ಇನ್ ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ವತಿಯಿಂದ M/s Nandi Infrastructure Corridor Enterprises Ltd (M/s NICEL) ರವರೊಂದಿಗೆ ದಿನಾಂಕ:03-04-1997 ರಲ್ಲಿ Frame Work Agreement ಮಾಡಿಕೊಳ್ಳಲಾಗಿರುತ್ತದೆ.<br>• FWA ರನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನಪಡಿಸಿಕೊಂಡು ಸಂಸ್ಥೆಗೆ ಹಸ್ತಾಂತರಿಸುವುದು ಹಾಗೂ ಸಂಸ್ಥೆಯು ಟೋಲ್ ರಸ್ತೆ ಮತ್ತು 5 ಟೌನ್‌ಶಿಪ್‌ಗಳ ನಿರ್ಮಾಣವನ್ನು ಕೈಗೊಳ್ಳುವುದು ಯೋಜನೆಯ ಮುಖ್ಯ ಷರತ್ತು ಆಗಿರುತ್ತದೆ. ಈ ನಿಟ್ಟಿನಲ್ಲಿ ಉಳಿದಂತೆ, FWA ರಲ್ಲಿರುವ ಎಲ್ಲಾ ಷರತ್ತುಗಳನ್ವಯ ಮೆ॥ ನೈಸ್ ಸಂಸ್ಥೆರವರು ಬಿಎಂಐಸಿಪಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.<br>• FWA ನ Article-3.3.1 ರನ್ವಯ Toll Road Completion Notice ನೀಡಿದ ದಿನಾಂಕದಿಂದ 30 ವರ್ಷಗಳ ಅವಧಿಗೆ Concession Period ಇರುತ್ತದೆ ಹಾಗೂ ಈ ಅವಧಿಯನ್ನು ಪರಸ್ಪರ ಒಪ್ಪಂದದ ಪ್ರಕಾರ ಹೆಚ್ಚುವರಿ ಅವಧಿಗೆ ವಿಸ್ತರಿಸಲು ಅವಕಾಶವಿರುತ್ತದೆ.<br>• FWA ನ Article-6.6 ರಂತೆ ಟೋಲ್ ರಸ್ತೆಯನ್ನು 3 ಹಂತಗಳಲ್ಲಿ ಕೈಗೊಳ್ಳಲಾಗುತ್ತಿದ್ದು ಪೂರ್ಣಗೊಳಿಸಬೇಕಾದ ಅವಧಿಯ ವಿವರಗಳು ಕೆಳಕಂಡಂತಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
| --- | --- | --- |
| | | **6.6 Completion**<br><br>6.6.3. The company shall complete the toll road in accordance with the following time schedule:<br><br>**Phase I Road** - Within five (5) years of the date of initial Financial Closing and satisfaction of all the conditions precedent in Paragraph 2.1.1. i.e., Conditions precedent to Land Acquisition.<br><br>**Phase II Road** - Within three (3) years of the completion of the Phase I Road as set forth in the Phase I road Completion Notice and satisfaction of all the conditions precedent in Paragraph 2.1.1. i.e., Conditions precedent to Land Acquisition.<br><br>**Balance of Toll Road** - Within two (2) years of the completion of the Phase II Road as set forth in the Phase II Road Completion Notice and satisfaction of all the conditions precedent in Paragraph 2.1.1. i.e., Conditions precedent to Land Acquisition.<br><br>ತದನಂತರದಲ್ಲಿ ಮೇಲ್ಕಂಡ ಭಾಗಗಳನ್ನು ಪೂರಕ ಕರಾರು ದಿನಾಂಕ:06.10.1999 ರಲ್ಲಿ ಈ ಕೆಳಕಂಡಂತೆ ಟೋಲ್ ರಸ್ತೆಯನ್ನು ಪೂರ್ಣಗೊಳಿಸಲು ಕೆಳಕಂಡಂತೆ ಷರತ್ತನ್ನು ಪರಿಷ್ಕರಿಸಲಾಗಿರುತ್ತದೆ.<br><br>**Clause 6.6.3.** shall be substituted and read as under: The company shall complete the toll road in accordance with the following time schedule:<br><br>**Section A:** Within-eight (8) years of the date of initial Financial closing and satisfaction of all the conditions precedent in Paragraph 2.1.1. with the first milestone achievement of the first phase of the road in the first 5 years.<br><br>**Section B:** Within ten (10) years of the date of initial Financial Closing and satisfaction of all the conditions precedent in Paragraph 2.1.1.<br><br>**Section C:** Within ten (10) years of the date of initial |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| | | Financial Closing and satisfaction of all the conditions precedent in Paragraph 2.1:1 |
| ಆ) | ನೈಸ್ ರಸ್ತೆಯಲ್ಲಿ ಸಾರ್ವಜನಿಕರಿಂದ ವಸೂಲಿ ಮಾಡಲಾಗುತ್ತಿರುವ ಟೋಲ್ ಶುಲ್ಕವನ್ನು ನಿಗದಿಪಡಿಸುವಲ್ಲಿ ಸರ್ಕಾರದ ಅನುಮೋದನೆ ಪಡೆದಿದೆಯೇ; ಇಲ್ಲದಿದ್ದರೆ ಕಾರಣವೇನು; | • ಮೆ॥ ನೈಸ್ ಸಂಸ್ಥೆ ವತಿಯಿಂದ ರಸ್ತೆಯನ್ನು ನಿರ್ಮಾಣಗೊಳಿಸಿದ ನಂತರ ಟೋಲ್ ಸಂಗ್ರಹಿಸುವುದಕ್ಕೆ ದಿನಾಂಕ:04.09.2000 ರಂದು ಸರ್ಕಾರದೊಂದಿಗೆ Toll Concession Agreement ಮಾಡಿಕೊಳ್ಳಲಾಗಿರುತ್ತದೆ.<br>• ಮೆ॥ ನೈಸ್ ಸಂಸ್ಥೆಯವರು ಟೋಲ್ ಪರಿಷ್ಕರಣೆಗೆ ಸಂಬಂಧಿಸಿದಂತೆ Toll Concession ಕರಾರಿನ ಆರ್ಟಿಕಲ್ 6.4 ರನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಒಂದು ವೇಳೆ ಸರ್ಕಾರವು 30 ದಿನಗಳ ಒಳಗೆ ಕ್ರಮ ಕೈಗೊಳ್ಳದೇ ಇದ್ದ ಪಕ್ಷದಲ್ಲಿ ಸರ್ಕಾರದ ಅನುಮೋದನೆ ಇದೆ ಎಂದು ಪರಿಗಣಿಸಿ ಸಂಸ್ಥೆಯು ಟೋಲ್ ದರವನ್ನು ಪರಿಷ್ಕರಿಸಲು ಅವಕಾಶವಿರುತ್ತದೆ.<br>• Toll Concession ಕರಾರಿನ್ವಯ ಮೆ॥ ನೈಸ್ ಸಂಸ್ಥೆರವರು 2008, 2010 ಮತ್ತು 2011ನೇ ಸಾಲಿನವರೆಗೂ ಸಲ್ಲಿಸಿರುವ ಪ್ರಸ್ತಾವನೆಗಳಿಗನುಗುಣವಾಗಿ ಟೋಲ್ ದರಗಳನ್ನು ಪರಿಷ್ಕರಿಸಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>➢ ರಾಜ್ಯ ಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ಬೆಂಗಳೂರು ದಿನಾಂಕ:18.12.2008<br>➢ ರಾಜ್ಯ ಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ಬೆಂಗಳೂರು ದಿನಾಂಕ:01-01-2010<br>➢ ರಾಜ್ಯ ಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ಬೆಂಗಳೂರು ದಿನಾಂಕ:29-05-2010<br>➢ ರಾಜ್ಯ ಪತ್ರ ಸಂಖ್ಯೆ: ಲೋಇ 86 ಸಿಆರ್‌ಎಂ 2010, ಬೆಂಗಳೂರು ದಿನಾಂಕ:05-02-2011<br>• ತದನಂತರದಲ್ಲಿ NICE ಸಂಸ್ಥೆಯು ಪತ್ರ ದಿನಾಂಕ: 22-11-2022 ರಲ್ಲಿ 2023ನೇ ಸಾಲಿಗೆ ದರ ಪರಿಷ್ಕರಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಹೊರತು ಪಡಿಸಿದರೆ ಇತರೆ ವರ್ಷಗಳ ಅವಧಿಯ ಟೋಲ್ ಪರಿಷ್ಕರಣೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಿಲ್ಲ. |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| | | • ಮುಂದುವರೆದು, ಸಂಸ್ಥೆಯು ಯೋಜನೆಯ Project Technical Report (PTR) ರನ್ವಯ ರಸ್ತೆ ನಿರ್ಮಿಸದೇ ಇರುವ ಕಾರಣ ಸರ್ಕಾರವು ದಿನಾಂಕ:05.02.2016 ರಂದು ಸಂಸ್ಥೆಗೆ Default Notice ನೀಡಿದ್ದರ ಹಿನ್ನೆಲೆಯಲ್ಲಿ ಸಂಸ್ಥೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P.12109/2016 ಪ್ರಕರಣ ದಾಖಲಿಸಿರುತ್ತದೆ. ಪ್ರಕರಣವು ಇತ್ಯರ್ಥವಾಗದೇ ಬಾಕಿ ಇರುವುದರಿಂದ ಸಂಸ್ಥೆಯ ದಿನಾಂಕ; 22-11-2022 ರಲ್ಲಿ ಸಲ್ಲಿಸಿದ್ದ ಟೋಲ್ ದರ ಪರಿಷ್ಕರಣೆಗೆ ಸರ್ಕಾರದಿಂದ ಅನುಮೋದನೆ ನೀಡುವ ಸಂಬಂಧ ಕ್ರಮ ವಹಿಸಿರುವುದಿಲ್ಲ.<br>• ಸಂಸ್ಥೆಯು 2011 ರ ನಂತರ 2025ರ ವರೆಗೆ ದಿನಾಂಕ: 06-07-2017, ದಿನಾಂಕ: 30-06-2022, ದಿನಾಂಕ: 30-06-2023, ದಿನಾಂಕ: 30-06-2024 ಹಾಗೂ ದಿನಾಂಕ: 30-06-2025 ರಂದು ದರ ಪರಿಷ್ಕರಣೆಗೆ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿರುವುದು ಗಮನಕ್ಕೆ ಬಂದಿದ್ದು ಸರ್ಕಾರಕ್ಕೆ ಮಾಹಿತಿ ನೀಡದೆ ದರ ಪರಿಷ್ಕರಣೆ ಮಾಡಿರುವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮವಹಿಸಲಾಗಿದೆ. |
| ಇ) | ಟೋಲ್ ಶುಲ್ಕ ದರಗಳನ್ನು ಮರುಪರಿಶೀಲಿಸಲು ಸರ್ಕಾರ ಯಾವುದೇ ಸಮಿತಿ ಅಥವಾ ಪ್ರಾಧಿಕಾರವನ್ನು ನೇಮಕ ಮಾಡಿದೆಯೇ; ಇದ್ದರೆ, ಅದರ ವರದಿ ನೀಡುವುದು; | ದಿನಾಂಕ:11.04.2025ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ BMICP ಯೋಜನೆಯ ಬಗ್ಗೆ ಪರಿಶೀಲಿಸಲು ದಿನಾಂಕ:16.04.2025ರಂದು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯ Terms of Reference ನಲ್ಲಿ "ಕಂಪನಿಯು ಇಲ್ಲಿಯವರೆವಿಗೂ ರಸ್ತೆ ನಿರ್ಮಾಣಕ್ಕೆ ಮಾಡಿರಬಹುದಾದ ಹೂಡಿಕೆ, ಬಳಸಿದ ಜಮೀನು ಹಾಗೂ 2008 ರಿಂದ ಇಲ್ಲಿಯವರೆವಿಗೂ ಸದರಿ ಕಂಪನಿಯು ಟೋಲ್ ಮೂಲಕ ಗಳಿಸಿರುವ ಆದಾಯದ ಒಟ್ಟಾರೆ ಲೆಕ್ಕವನ್ನು ಪಡೆದು ಪರಿಶೀಲಿಸುವ" ಅಂಶವು ಸೇರ್ಪಡೆಯಾಗಿರುತ್ತದೆ. ಸದರಿ ವಿಷಯವನ್ನು ಪರಿಶೀಲಿಸಲು ಉಪಸಮಿತಿಯ ಸೂಚನೆಯಂತೆ ಟೆಂಡರ್ ಮುಖಾಂತರ ಸಮಾಲೋಚಕರನ್ನು ನೇಮಿಸಲಾಗಿದ್ದು ಪರಿಶೀಲನೆಯಲ್ಲಿದೆ. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಈ)</td><td>ನೈಸ್ ರಸ್ತೆಯಲ್ಲಿ ಆಗಾಗ ಉಂಟಾಗುತ್ತಿರುವ ಟ್ರಾಫಿಕ್ ಜಾಮ್, ಅಪಘಾತಗಳು ಮತ್ತು ನಿರ್ವಹಣಾ ಕೊರತೆಯ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಮಸ್ಯೆಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಬಿಎಂಐಸಿ ಯೋಜನೆಯ ರಸ್ತೆಗಳಲ್ಲಿ ಉಂಟಾಗುತ್ತಿರುವ ಅಪಘಾತಗಳ ಬಗ್ಗೆ ಬೆಂಗಳೂರು ನಗರ ಜಿಲ್ಲೆ ಸುರಕ್ಷತೆ ಸಮಿತಿ ಸಭೆಯಲ್ಲಿ ಚರ್ಚೆಯಾಗುತ್ತಿದ್ದು, ದಿನಾಂಕ: 20.08.2025 ರಲ್ಲಿ ನಡೆದ ಸಭೆಯಲ್ಲಿ ಸದರಿ ರಸ್ತೆಗಳಲ್ಲಿ ಉಂಟಾಗುತ್ತಿರುವ ಅಪಘಾತಗಳನ್ನು ತಗ್ಗಿಸಲು ಹಾಗೂ ವೇಗದ ಮಿತಿಯನ್ನು ನಿಗಾವಹಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಬೆಂಗಳೂರು – ಮೈಸೂರು ರಸ್ತೆಯಲ್ಲಿ (ರಾಷ್ಟ್ರೀಯ ಹೆದ್ದಾರಿ-275) ರಲ್ಲಿ ಅಳವಡಿಸಿರುವಂತೆ ನೈಸ್ ರಸ್ತೆಯಲ್ಲೂ ಸಹಾ ಎಐ ಕ್ಯಾಮರಾಗಳನ್ನು ಅಳವಡಿಸುವ ಬಗ್ಗೆ ಚರ್ಚೆಯಾಗಿದ್ದು, ಮೇ॥ನೈಸ್ ಸಂಸ್ಥೆರವರು ಹಾಲಿಯಿರುವ ರಸ್ತೆಗಳಲ್ಲಿ 40 ಸ್ಥಳಗಳನ್ನು ಗುರುತಿಸಿದ್ದು, ಈ ಪೈಕಿ 2 ಸ್ಥಳಗಳಲ್ಲಿ ಎಐ ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ (ನಡವಳಿಯ ಪ್ರತಿ ಲಗತ್ತಿಸಿದೆ)</td></tr>
<tr><td>ಉ)</td><td>ಸಾರ್ವಜನಿಕರಿಂದ ಬರುತ್ತಿರುವ ದೂರುಗಳ ಆಧಾರದಲ್ಲಿ ನೈಸ್ ರಸ್ತೆ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ದಂಡಾತ್ಮಕ ಕ್ರಮಗಳಿಗಾಗಿ ಸರ್ಕಾರ ಯಾವ ವ್ಯವಸ್ಥೆಯನ್ನು ಜಾರಿಗೆ ತಂದಿದೆ:</td><td rowspan="2">ದಿನಾಂಕ:11.04.2025ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ದಿನಾಂಕ:16.04.2025ರಂದು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯ ಮುಂದೆ ಸದರಿ ವಿಷಯವು ಪರಿಶೀಲನೆ ಹಂತದಲ್ಲಿರುತ್ತದೆ.</td></tr>
<tr><td>ಊ)</td><td>ಭವಿಷ್ಯದಲ್ಲಿ ನೈಸ್ ರಸ್ತೆಯನ್ನು ಸರ್ಕಾರದ ನಿಯಂತ್ರಣಕ್ಕೆ ತರಲು ಅಥವಾ ಟೋಲ್ ಶುಲ್ಕ ಕಡಿಮೆಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?</td></tr>
</table>

ಸಂಖ್ಯೆ:ಲೋಇ 121 ಸಿಆರ್‌ಎಂ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

::ದಿನಾಂಕ 20.08.2025 ರಂದು ಪೂರ್ವಾಹ್ನ 11.00 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಇವರ ಕಛೇರಿ ಸಭಾಂಗಣದಲ್ಲಿ ನಡೆದ ಬೆಂಗಳೂರು ನಗರ ಜಿಲ್ಲೆ ರಸ್ತೆ ಸುರಕ್ಷತಾ ಸಮಿತಿ ಸಭೆಯ ನಡಾವಳಿ::

ಅಧ್ಯಕ್ಷರು:-

ಶ್ರೀ ಜಗದೀಶ ಜಿ ಐ.ಎ.ಎಸ್
ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
ಮತ್ತು ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ ರಸ್ತೆ ಸುರಕ್ಷತಾ ಸಮಿತಿ.

ಉಪಸ್ಥಿತರು:-

1 ಶ್ರೀ. ಜಗದೀಶ್ ಕೆ ನಾಯಕ್ ಕೆ.ಎ.ಎಸ್
ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
2 ಎ ವಿವೇಕಾನಂದಾ
ಆರ್.ಟಿ.ಓ., ಜ್ಞಾನಭಾರತಿ,
3 ಶ್ರೀನಿವಾಸ್ ಗೌಡ,
ಯೋಜನಾ ನಿರೀಕ್ಷಕರು,
ಎನ್.ಹೆಚ್.ಎ.ಐ
4 ಪ್ರಕಾಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು,
ರಾಷ್ಟ್ರೀಯ ಹೆದ್ದಾರಿ ಉಪ-ವಿಭಾಗ, ಬೆಂಗಳೂರು
5 ಮೊಹಮದ್ ಆಸೀಫ್,
108 ಬೆಂಗಳೂರು ಪ್ರೋಗ್ರಾಮ್ ಮ್ಯಾನೇಜರ್,
6 ಸಿ.ಎಸ್ ಪ್ರಮುಖೇಶ್
ಆರ್.ಟಿ.ಓ., ಚಂದಾಪುರ
7 ಎ ಪಿ ರಮೇಶ್,
ಆರ್.ಟಿ.ಓ., ಬೆಂ.ದಕ್ಷಿಣ,
8 ಎಸ್.ವಾಸು
ಎಸ್.ಐ. ಡಿ.ಡಿ.ಪಿ.ಐ., ಬೆಂಗಳೂರು ಉತ್ತರ
9 ಜಮೀರ್ ಪಾಷಾ
ಇ.ಓ. ಡಿ.ಡಿ.ಪಿ.ಐ., ಬೆಂಗಳೂರು ದಕ್ಷಿಣ
10 ಅಮರೇಶ್ ಚೆಲ್ವಾ
ಆರ್.ಟಿ.ಓ., ಯಲಹಂಕ,
11 ಪ್ರತಿಮಾ,
ವಿಭಾಗೀಯ ನಿಯಂತ್ರಕರು, ಬಿ.ಎಂ.ಟಿ.ಸಿ.,
12 ಭಾಗ್ಯಲಕ್ಷ್ಮೀ ಎಂ ಆವತಿ,
ಡಿ.ಟಿ.ಡಿ., ಕೆ.ಎಸ್.ಆರ್.ಟಿ.ಸಿ, ಬೆಂಗಳೂರು
13 ಶ್ರೀಕಾಂತ್ ಕರಿಜಗಿ
ಕಾರ್ಯಪಾಲಕ ಅಭಿಯಂತರರು,
ಕೆ.ಆರ್.ಡಿ.ಸಿ.ಎಲ್
14 ಪ್ರಸನ್ನ ಕುಮಾರ್,
ಪಿ.ಐ.ಯು, ಕೃಷ್ಣಗಿರಿ
15 ಸತೀಶ್ ಬಾಬು,
ಆರ್.ಟಿ.ಓ., ಬೆಂಗಳೂರು.
16 ಸೌರಭ್ ಚೌಧರಿ,
ಅಧೀಕ್ಷಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ,
ಬೆಂಗಳೂರು.
17 ವರುಣ್ ವೈ ಎಸ್,
ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ,
ಬೆಂಗಳೂರು.

18 ಕೆ ಸಾಯಿಶ್ವರ ರಾವ್
ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪ್ರತಿನಿಧಿಗಳು, ಬೆಂಗಳೂರು.
19 ಸಯದ್ ನುಮನ್
ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪ್ರತಿನಿಧಿಗಳು, ಬೆಂಗಳೂರು.
20 ಸುಧಾಕರ್ ಆರ್
ನೈಸ್ ಸಂಸ್ಥೆ ಪ್ರತಿನಿಧಿಗಳು,
21 ಚೈತ್ರಾ ಜಿ.ಬಿ,
ಸ.ಕಾ.ಇಂ., ಕೆ.ಆರ್.ಡಿ.ಸಿ.ಎಲ್
22 ಕವಿತಾ ಬಿ ಎನ್
ಸ.ಕಾ.ಇಂ., ಕೆ.ಆರ್.ಡಿ.ಸಿ.ಎಲ್
23 ಪಲ್ಲವಿ ಡಿ. ಮತ್ತು ಲಕ್ಷ್ಮೀ ಎಂ.,
ಡಿ.ಐ.ಪಿ.ಆರ್.,
24 ಬಿ.ಸಿ. ವೆಂಕಟೇಶ ಪಿ.ಆರ್.ಓ. ರಾ.ಹೆ. ಟೋಲ್
25 ಶ್ರೀ ಅಪರಾಜಿತ ರೇ,
Bloomberg Philanthropies Initiative for Global Road Safety, ಬೆಂಗಳೂರು ನಗರ ಜಿಲ್ಲೆ,
26 ಎಲ್ ರಾಜ್ ಕುಮಾರ್
ಸ.ಕಾ.ಇಂ., ಬೆಂ.ದಕ್ಷಿಣ, ಲೋ.ಇ., ಉಪ–ವಿಭಾಗ,
(ಸದಸ್ಯ ಕಾರ್ಯದರ್ಶಿಗಳ ಪರವಾಗಿ)

*–*–*–*–*

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಪರವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ., ನಂ.1 ದಕ್ಷಿಣ ಉಪ–ವಿಭಾಗರವರಾದ ಶ್ರೀ ರಾಜ್ ಕುಮಾರ್ ರವರು, ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಹಾಗೂ ಸರ್ಕಾರೇತರ ಸಂಸ್ಥೆಯವರನ್ನು ಸಭೆಗೆ ಸ್ವಾಗತಿಸಿದರು.

ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳ ಮಾಹಿತಿಯನ್ನು ಪಡೆದುಕೊಂಡು ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು. ಸಭೆಯಲ್ಲಿ ಪ್ರಮುಖವಾಗಿ ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಹಾಜರಿಲ್ಲದ ಹಾಗೂ ಶಿಕ್ಷಣ ಇಲಾಖೆಯಿಂದ ಉಪನಿರ್ದೇಶಕರ ಪರವಾಗಿ ಇತರೆ ಅಧಿಕಾರಿಗಳು ಹಾಜರಿದ್ದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಹೆಚ್ಚಿನ ಪ್ರಾಮುಖ್ಯತೆ ಹೊಂದಿದ್ದು, ಈ ಸಭೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಖುದ್ದು ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಮುಂದಿನ ಸಭೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಖುದ್ದು ಹಾಜರಿರಲು ಸೂಚಿಸಿದರು.

ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುವ ಜಿಲ್ಲೆಗಳಲ್ಲಿ ಬೆಂಗಳೂರು ನಗರವು ಮೊದಲನೇ ಸ್ಥಾನದಲ್ಲಿದ್ದು, ಅಪಘಾತಗಳ ಸಂಖ್ಯೆಗಳನ್ನು ನಿಯಂತ್ರಿಸುವ ಜವಾಬ್ದಾರಿ ಜಿಲ್ಲಾ ರಸ್ತೆ ಸುರಕ್ಷತೆ ಸಮಿತಿಯ ಎಲ್ಲಾ ಇಲಾಖೆಯ ಅಧಿಕಾರಿಗಳದಾಗಿರುತ್ತದೆ ಎಂದು ತಿಳಿಸಿದರು.

**<u>ಶಿಕ್ಷಣ ಇಲಾಖೆ</u>**

ಶ್ರೀ ಜಮೀರ್ ಪಾಷಾ, ಇ.ಓ ಡಿ.ಡಿ.ಪಿ.ಐ., ಕಛೇರಿ, ಬೆಂಗಳೂರು ದಕ್ಷಿಣರವರು ಮತ್ತು ಶ್ರೀ ಎಸ್ ವಾಸು, ಎಸ್.ಐ, ಡಿ.ಡಿ.ಪಿ.ಐ ಬೆಂಗಳೂರು ಉತ್ತರ ಕಛೇರಿಯವರು ಮಾತನಾಡುತ್ತಾ, ಸರ್ಕಾರೇತರ ಸಂಸ್ಥೆಗಳ ಮತ್ತು ಸಂಚಾರಿ ಪೊಲೀಸರ ಸಹಯೋಗದೊಂದಿಗೆ ವಿವಿಧ ಶಾಲೆಗಳಲ್ಲಿ ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳುತ್ತಿರುವುದಾಗಿ ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು, ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಶಾಲೆಗಳ ಸಂಖ್ಯೆಗಳ ವಿವರಗಳನ್ನು ಒದಗಿಸುವಂತೆ ಸೂಚಿಸಿದರು. ಆದರೆ, ಈ ಬಗ್ಗೆ ಮಾಹಿತಿ ಇಲ್ಲದಿರುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿ ಶಿಕ್ಷಣ ಇಲಾಖೆ ವತಿಯಿಂದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು, ಪರಿಚಾರಕರು ಮತ್ತು ವಾಹನಗಳ ಚಾಲಕರುಗಳಿಗೆ ಅರಿವು ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳಲು ಮತ್ತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಬಗ್ಗೆ ವಿವರಗಳನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಲು ಸೂಚಿಸಿದರು. ಮುಂದಿನ ಸಭೆಗೆ ಡಿ.ಡಿ.ಪಿ.ಯು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರುಗಳನ್ನು ಆಹ್ವಾನಿಸಲು ಸೂಚಿಸಿದರು. (ಕ್ರಮ- ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)

## ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ

ಸಮಿತಿ ಸಭೆಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ಹಾಜರಿಲ್ಲದ ಬಗ್ಗೆ ಮಾನ್ಯ ಅಧ್ಯಕ್ಷರು ಆಕ್ಷೇಪ ವ್ಯಕ್ತಪಡಿಸಿ ಮುಂದಿನ
ಸಭೆಗೆ ಕಡ್ಡಾಯವಾಗಿ ಹಾಜರಿರಲು ಸೂಚಿಸಿದರು, ನೂತನ ರಾಷ್ಟ್ರೀಯ ರಸ್ತೆ ಸುರಕ್ಷತಾ ನೀತಿಯಂತೆ ರಸ್ತೆ ಅಪಘಾತದಲ್ಲಿನ
ಗಾಯಾಳುಗಳಿಗೆ ನಗದು ರಹಿತ ಚಿಕಿತ್ಸೆ ನೀಡುವ ಸಂಬಂಧ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ನೋಡಲ್
ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಿದರು. ಮೊಹಮದ್ ಆಸೀಫ್, 108 ಬೆಂಗಳೂರು ಪ್ರೋಗ್ರಾಮ್
ಮ್ಯಾನೇಜರ್ ರವರು ಮಾತನಾಡುತ್ತಾ, ಅಂಬ್ಯೂಲೆನ್ಸ್‌ಗಳ "Response Time" ಹದಿನೈದು ನಿಮಿಷ ನಿಗಧಿಗೊಳಿಸಿದ್ದು, ಪ್ರಸ್ತುತ
ವಾಹನ ದಟ್ಟಣೆ ಮತ್ತು ಇನ್ನಿತರೆ ಕಾರಣಗಳಿಂದಾಗಿ ಇಪತ್ತು ನಿಮಿಷಗಳ ವರೆಗೆ ಆಗುತ್ತಿದೆ ಎಂದು ತಿಳಿಸಿದರು. ಅಪರ
ಜಿಲ್ಲಾಧಿಕಾರಿಗಳು ಅಪಘಾತದ ಗಾಯಾಳುಗಳನ್ನು ಚಿಕಿತ್ಸೆಗೆ ಒಳಪಡಿಸಲು ನಿಗಧಿಪಡಿಸಿರುವ ಆಸ್ಪತ್ರೆಗಳ ಮ್ಯಾಪಿಂಗ್
ಮಾಡಲಾಗಿದೆಯೇ ಎಂದು ಕೇಳಿದರು. ಆದರೆ ಈ ಬಗ್ಗೆ ಮಾಹಿತಿ ಇಲ್ಲದಿರುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಆಕ್ಷೇಪ
ವ್ಯಕ್ತಪಡಿಸಿ ಆಸ್ಪತ್ರೆಗಳ ಮ್ಯಾಪಿಂಗ್ ಕಾರ್ಯವನ್ನು ಮಾಡುವುದರಿಂದ, ಅಪಘಾತಗಳು ಸಂಭವಿಸುವ ಸ್ಥಳಗಳಿಗೆ ಹತ್ತಿರವಿರುವ
ಆಸ್ಪತ್ರೆಗಳ ಬಗ್ಗೆ ಆಂಬ್ಯೂಲೆನ್ಸ್ ಚಾಲಕರಿಗೆ ಮಾಹಿತಿ ಶೀಘ್ರ ಲಭ್ಯವಾಗುತ್ತದೆ. ಇದರಿಂದಾಗಿ ಗಾಯಾಳುಗಳನ್ನು ವಿಳಂಬವಿಲ್ಲದೇ
ಸಮೀಪದ ಆಸ್ಪತ್ರೆಗೆ ಸೇರಿಸಲು ಅನುಕೂಲವಾಗುತ್ತದೆ. ಆದ್ದರಿಂದ ಕೂಡಲೇ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳ
ಮ್ಯಾಪಿಂಗ್‌ನ್ನು ಆಂಬ್ಯುಲೆನ್ಸ್‌ಗಳ ಚಾಲಕರುಗಳಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲು 108 ಬೆಂಗಳೂರು ಪ್ರೋಗ್ರಾಮ್
ಮ್ಯಾನೇಜರ್‌ರವರಿಗೆ ತಿಳಿಸಿದರು. ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಮೊಬೈಲ್ ಆಪ್
ಒಂದು ಲಭ್ಯವಿರುವ ಬಗ್ಗೆ ಮಾಹಿತಿಯಿದ್ದು, ಈ ಆಪ್‌ನಲ್ಲಿ ಆಸ್ಪತ್ರೆಗಳ ವಿವರ, ಆಸ್ಪತ್ರೆಗಳಲ್ಲಿ ಖಾಲಿಯಿರುವ ಬೆಡ್‌ಗಳ ವಿವರ,
ಆಸ್ಪತ್ರೆಯಲ್ಲಿ ದೊರಕುವ ಚಿಕಿತ್ಸೆಗಳ ಬಗ್ಗೆ ವಿವರಗಳು ಲಭ್ಯವಿರುವುದಾಗಿ ತಿಳಿಸುತ್ತಾ, ಈ ಆಪ್‌ಗಳನ್ನು ಉಪಯೋಗಿಸಿಕೊಂಡು
ಅಪಘಾತಗಳ ಗಾಯಾಳುಗಳನ್ನು ಶೀಘ್ರವಾಗಿ ಮತ್ತು ಸೂಕ್ತವಾದ ಆಸ್ಪತ್ರೆಗೆ ಸಾಗಿಸಲು ಅನುಕೂಲವಾಗುವುದರಿಂದ, ಈ ಆಪ್‌ನ
ಬಗ್ಗೆ ಆಂಬ್ಯುಲೆನ್ಸ್‌ಗಳ ಚಾಲಕರುಗಳಿಗೆ ಅಗತ್ಯ ತರಬೇತಿ ನೀಡಲು ಕ್ರಮ ಕೈಗೊಳ್ಳಲು ಸೂಚಿಸಿದರು. ನಿಖರವಾಗಿ ಪ್ರಸ್ತುತ
"Response Time" ಎಷ್ಟು ನಿಮಿಷಗಳಾಗಿರುತ್ತದೆ ಎಂಬುದರ ಬಗ್ಗೆ ಹಾಗೂ "Response Time" ಹೆಚ್ಚಾಗಲು ಕಾರಣಗಳ
ಬಗ್ಗೆ ಮಾಹಿತಿಯನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಲು ಸೂಚಿಸಿದರು. (ಕ್ರಮ– ಜಿಲ್ಲಾ ಆರೋಗ್ಯಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ)

## ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ

ಸಭೆಗೆ ಪೊಲೀಸ್ ಇಲಾಖೆಯ ಸದಸ್ಯರು ಹಾಜರಾಗಿಲ್ಲದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು, ಜಿಲ್ಲಾ ಪೊಲೀಸ್
ವರಿಷ್ಠಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆ ರವರನ್ನು ಹಾಗೂ ಪೊಲೀಸ್
ಕಮೀಷನರೇಟ್ ವ್ಯಾಪ್ತಿಯ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಿರಲು ತಿಳಿಸಲು
ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 2024ರ ಏಪ್ರಿಲ್ ಮಾಹೆಯಿಂದ ಈವರೆಗೆ ಪೊಲೀಸ್ ಠಾಣೆವಾರು
ಸಂಭವಿಸಿರುವ ಅಪಘಾತಗಳು, ಸಾವುಗಳು ಮತ್ತು ಗಾಯಗೊಂಡವರ ಬಗ್ಗೆ ತ್ರೈಮಾಸಿಕ ವಿವರಗಳನ್ನು ಪೊಲೀಸ್
ಇಲಾಖೆಯಿಂದ ಪಡೆದು ಮುಂದಿನ ಸಭೆಯಲ್ಲಿ ಪಿ.ಪಿ.ಟಿ ಪ್ರಾತ್ಯಕ್ಷಿಕೆ ಪ್ರದರ್ಶಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು.

ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆಗಳು, ಲೋಕೋಪಯೋಗಿ ಇಲಾಖೆ ರಸ್ತೆಗಳು ಹಾಗೂ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ರಸ್ತೆಗಳಲ್ಲಿ ಗುರುತಿಸಲಾಗಿರುವ ಬ್ಲಾಕ್ ಸ್ಪಾಟ್‌ಗಳ ಪಟಿಯನ್ನು ಹಾಗೂ
ಸದರಿ ಬ್ಲಾಕ್ ಸ್ಪಾಟ್‌ಗಳನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಗಳನ್ನು ಇಂಜಿನಿಯರಿಂಗ್ ಇಲಾಖೆ ಹಾಗೂ
ಪೊಲೀಸ್ ಇಲಾಖೆ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಸಲ್ಲಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು. (ಕ್ರಮ– ಪೊಲೀಸ್
ವರಿಷ್ಠಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಪೊಲೀಸ್ ವರಿಷ್ಠಾಧಿಕಾರಿಗಳು, ಬೆಂಗಳೂರು ಧಕ್ಷಿಣ ಜಿಲ್ಲೆ & ಕಾರ್ಯಪಾಲಕ
ಅಭಿಯಂತರರು, ಆರ್.ಡಿ.ಪಿ.ಆರ್., ಲೋಕೋಪಯೋಗಿ ಇಲಾಖೆ)

## ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ

ಶ್ರೀ ವಿವೇಕಾನಂದ, ಪ್ರಾದೇಶಿಕ ಸಾರಿಗೆ ಕಛೇರಿ, ಜ್ಞಾನಭಾರತಿ ರವರು ಮಾತಾನಾಡುತ್ತಾ, ಕಳೆದ ಸಭೆಯಲ್ಲಿ ಸೂಚಿಸಿದ್ದಂತೆ ರಸ್ತೆಗಳಲ್ಲಿ ನಿಗಧಿಪಡಿಸಿರುವ ಭಾರಕ್ಕಿಂತ ಹೆಚ್ಚಿನ ಭಾರ ಹೊತ್ತು ಸಾಗುತ್ತಿದ್ದ 90 ಟ್ರಕ್‌ಗಳ ಮೇಲೆ ಪ್ರಸ್ತುತ ಸಾಲಿನಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದರು. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತೆ ನಿಯಮಗಳನ್ನು ಉಲ್ಲಂಘಿಸುವ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ 50660 ಪ್ರಕರಣಗಳನ್ನು ಕಳೆದ ಸಾಲಿನಲ್ಲಿ ದಾಖಲಿಸಲಾಗಿದೆ ಮತ್ತು ಪ್ರಸ್ತುತ ಸಾಲಿನಲ್ಲಿಯೂ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು.

2024ರ ಏಪ್ರಿಲ್ ಮಾಹೆಯಿಂದ ಈವರೆಗೆ ಆರ್.ಟಿ.ಓ ಕಛೇರಿವಾರು ದಾಖಲಿಸಿರುವ ರಸ್ತೆ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆಗಳ ತ್ರೈಮಾಸಿಕ ವಿವರಗಳನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಗಳಿಗೆ ನೀಡಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದರು.

ಶಾಲಾ ಕಾಲೇಜು ವಾಹನಗಳನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತಿದ್ದು, ಶಾಲಾ ಕಾಲೇಜು ವಾಹನಗಳಿಗೆ ಮತ್ತು ಸಾರ್ವಜನಿಕ ವಾಹನಗಳಿಗೆ VLTS ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದಾಗಿ ವಾಹನಗಳ ವೇಗದ ಮೇಲೆ ನಿಗಾವಹಿಸಬಹುದಾಗಿರುತ್ತದೆ ಮತ್ತು ವಾಹನಗಳು ಸಂಚರಿಸುವ ಮಾರ್ಗದ ಬಗ್ಗೆ ಮಾಹಿತಿಯು ಲಭ್ಯವಾಗುತ್ತದೆ. ವಾಹನಗಳಲ್ಲಿ ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲಾಗಿದ್ದು, ವಾಹನಗಳಲ್ಲಿ ಅಹಿತಕರ ಘಟನೆಗಳು ಸಂಭವಿಸಿದ್ದಲ್ಲಿ, ಪ್ಯಾನಿಕ್ ಬಟನ್‌ಗಳನ್ನು ಒತ್ತಿದೊಡನೆ ಇಲಾಖೆಯ ಕಂಟ್ರೋಲ್ ರೂಂಗೆ ಮಾಹಿತಿಯು ಲಭ್ಯವಾಗುತ್ತದೆ ಎಂದು ತಿಳಿಸಿದರು. ಮದ್ಯಪಾನ ಮಾಡಿ ಶಾಲಾ ವಾಹನಗಳನ್ನು ಚಾಲಾಯಿಸುವ ಚಾಲಕರುಗಳನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸುತ್ತಿದ್ದು, ಮದ್ಯಪಾನ ಮಾಡಿರುವುದು ಕಂಡುಬಂದಲ್ಲಿ, ಕೂಡಲೇ ಚಾಲಕರ ಚಾಲನಾ ಪರವಾನಗಿಯನ್ನು ಅಮಾನತ್ತುಪಡಿಸಲಾಗುತ್ತಿದೆ ಎಂದು ತಿಳಿಸಿದರು. ಮದ್ಯಪಾನ ಮಾಡಿದ ಚಾಲಕರು ಶಾಲಾ ವಾಹನ ಚಲಾಯಿಸುತ್ತಿರುವುದು ಕಂಡು ಬಂದಲ್ಲಿ, ಶಾಲಾ ಆಡಳಿತ ಮಂಡಳಿಗಳ ವಿರುದ್ಧವು ಕ್ರಮ ಕೈಗೊಳ್ಳುವ ಬಗ್ಗೆ ನೋಟೀಸ್ ಜಾರಿಗೊಳಿಸಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸರಕು ಸಾಗಾಣಿಕೆ ವಾಹನಗಳಲ್ಲಿ ಜನರನ್ನು ಸಾಗಿಸುವ ವಾಹನಗಳು ಕಂಡುಬಂದಲ್ಲಿ ಅಂತಹ ವಾಹನಗಳ ಆರ್.ಸಿ ಯನ್ನು ಅಮಾನತ್ತುಪಡಿಸಲಾಗುತ್ತಿದೆ ಎಂದು ತಿಳಿಸಿದರು. ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ಮಾಡುವ ವಾಹನಗಳು ಹಾಗೂ ಕರ್ಕಶ ಶಬ್ಧ ಹೊಮ್ಮುವ ವಾಹನಗಳ ಚಾಲಕರ ವಾಹನ ಚಾಲನಾ ಪರವಾನಗಿಯನ್ನು ಅಮಾನತ್ತುಗೊಳಿಸಲಾಗುತ್ತಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದರು. ವ್ಹೀಲಿಂಗ್ ಮಾಡುವ ವಾಹನಗಳ ಆರ್.ಸಿ ಗಳನ್ನು ರದ್ದುಪಡಿಸಲು ಸಹ ಕ್ರಮ ಕೈಗೊಳ್ಳಲು ಸಾರಿಗೆ ಅಧಿಕಾರಿಗಳಿಗೆ . ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

ಚಾಲನಾ ಪರವಾನಗಿಯನ್ನು ಪಡೆಯಲು ಅರ್ಜಿ ಸಲ್ಲಿಸುವ ಎಲ್ಲರಿಗೂ ಕಡ್ಡಾಯವಾಗಿ ರಸ್ತೆ ಸುರಕ್ಷತಾ ಕ್ರಮಗಳನ್ನು ಪಾಲಿಸುವ ಬಗ್ಗೆ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ. ಇಲಾಖೆಯ ರಸ್ತೆ ಸುರಕ್ಷತಾ ಸೆಲ್ ಮೂಲಕ ಪ್ರತಿ ವರ್ಷ ಜನವರಿ ಮಾಹೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬಿ.ಎಂ.ಟಿ.ಸಿ ಚಾಲಕರಿಗೆ ಸೂಕ್ತ ಅರಿವಿನ ಕಾರ್ಯಕ್ರಮ ಆಯೋಜಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು. ಸಭೆಯಲ್ಲಿ ಹಾಜರಿದ್ದ ಪ್ರತಿಮಾ, ಬಿಎಂಟಿಸಿ Divisional Traffic Officer ರವರು ಪ್ರತಿ ಮಂಗಳವಾರ ಬಿ.ಎಂ.ಟಿ.ಸಿ ವತಿಯಿಂದ 40 ರಿಂದ 50 ಚಾಲಕರಿಗೆ ತರಬೇತಿ ನೀಡಲಾಗುತ್ತಿದ್ದು, ಇ-ವಾಹನಗಳ ಚಾಲಕರುಗಳಿಗೂ ನಿಯಮಿತವಾಗಿ ತರಬೇತಿ ನೀಡಲಾಗುತ್ತಿದೆ, ಈವರೆಗೆ 11800 ಚಾಲಕರಿಗೆ ತರಬೇತಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಪ್ರತಿ ಬಾರಿ ಬಿಎಂಟಿಸಿ ಬಸ್ ಅಪಘಾತವಾದಾಗ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದಾಗ, ಡಿ.ಟಿ.ಓ ರವರು ಬಿಎಂಟಿಸಿ ಬಸ್‌ಗಳು ಅಪಘಾತವಾಗುವ ಎಲ್ಲಾ ಸ್ಥಳಗಳನ್ನು ಖುದ್ದು ಪರಿಶೀಲಿಸುತ್ತಿದ್ದು, ಹಲವು ಅಪಘಾತಗಳಲ್ಲಿ ಬಿಎಂಟಿಸಿ ಚಾಲಕರ ಲೋಪವಿಲ್ಲದಿರುವುದು ಕಂಡುಬಂದಿರುತ್ತದೆ. ಬಿಎಂಟಿಸಿ ಡಿಪೋಗಳಲ್ಲಿ ವಾಹನ ಚಾಲಕರುಗಳಿಗೆ ಮದ್ಯಪಾನ ಪರೀಕ್ಷೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಿ.ಬಿ.ಎಂ.ಪಿ / ಸ್ಥಳೀಯ ಸಂಸ್ಥಗಳ ತ್ಯಾಜ್ಯ ವಿಲೇವಾರಿ ವಾಹನಗಳ ಚಾಲಕರಿಗೆ ಅಗತ್ಯ ತರಬೇತಿ ನೀಡಬೇಕಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಬೆಂಗಳೂರು ನಗರದಲ್ಲಿ ಕಟ್ಟಡ ನಿರ್ಮಿಸುವಾಗ ಲಭ್ಯವಾಗುವ ಮಣ್ಣು ಮತ್ತು ಇತರೆ ತ್ಯಾಜ್ಯಗಳನ್ನು ಹೊತ್ತು ಸಾಗುವ ವಾಹನಗಳಿಂದ ರಸ್ತೆಯ ಮೇಲೆ ಬೀಳುವ ಮಣ್ಣಿನಿಂದಾಗಿ ಹಾಗೂ ಕ್ರಷರ್‌ಗಳಿಂದ ಪೂರ್ಣವಾಗಿ ಮರಳಿನ ಮೇಲೆ ಟಾರ್‌ಪಲ್ ಮುಚ್ಚದೇ ಅತೀ ಭಾರ ಹೊತ್ತ ಮತ್ತು ಪರವಾನಗಿ ರಹಿತವಾಗಿ ನಗರಕ್ಕೆ ಬರುವ ಮರಳು ಮತ್ತು ಕಟ್ಟಡ ಸಾಮಗ್ರಿಗಳ ಲಾರಿಗಳಿಂದಾಗಿ ಅಪಘಾತಗಳು ಸಂಭವಿಸುತ್ತಿದ್ದು, ಇಂತಹ ವಾಹನಗಳು ಹೆಚ್ಚಾಗಿ ಮಾಗಡಿ ರಸ್ತೆ, ಯಲಹಂಕ ರಸ್ತೆ, ಕನಕಪುರ ರಸ್ತೆ ಮತ್ತು ಆನೇಕಲ್ ರಸ್ತೆಗಳಲ್ಲಿ ಕಂಡುಬರುತ್ತಿದ್ದು, ಅವುಗಳ ವಿರುದ್ಧ ಕ್ರಮ ಕೈಗೊಳ್ಳಲು ಸಾರಿಗೆ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು. ರಸ್ತೆ ಅಪಘಾತಗಳ ವಿವರಗಳನ್ನು Irad ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾಗುತ್ತಿದ್ದು, ಎಲ್ಲಾ ಅಪಘಾತಗಳ ವಿವರಗಳು Irad ನಲ್ಲಿ ಲಭ್ಯವಾಗುವುದಾಗಿ ತಿಳಿಸಿದರು. ಅತೀ ಭಾರ ಹೊತ್ತು ಬರುವ ವಾಹನಗಳನ್ನು ತಡೆಯುವ ಕುರಿತಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಸಹ ಕ್ರಮ ವಹಿಸಬೇಕು ಎಂದು ತಿಳಿಸಿದರು

ವಾರಾಂತ್ಯಗಳಲ್ಲಿ ಗುಂಪು ಗುಂಪಾಗಿ ಹೈ-ಎಂಡ್ ಬೈಕ್‌ಗಳು ಅತೀಯಾದ ಶಬ್ದದೊಂದಿಗೆ ನಗರದಿಂದ ಹೊರವಲಯಗಳಿಗೆ ಕುಣಿಗಲ್ ರಸ್ತೆ, ನೈಸ್ ರಸ್ತೆ ಮತ್ತು ದೇವನಹಳ್ಳಿ ರಸ್ತೆಗಳಲ್ಲಿ ಸಂಚರಿಸುವುದರಿಂದ ಇತರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಅಂತಹ ವಾಹನಗಳಿಂದ ಇತೀಚೆಗೆ 60 ಪ್ರಕರಣಗಳನ್ನು ದಾಖಲಿಸಿರುವುದಾಗಿ ಸಾರಿಗೆ ಅಧಿಕಾರಿಗಳು ತಿಳಿಸಿದರು. ಅಪರ ಜಿಲ್ಲಾಧಿಕಾರಿಗಳು, ವಾರಾಂತ್ಯಗಳಲ್ಲಿ ಗುಂಪು ಗುಂಪಾಗಿ ಸಂಚರಿಸುವ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲು ಸ್ಪೆಷಲ್ ಟಾಸ್ಕ್ ಪೋರ್ಸ್ ನ್ನು ರೂಪಿಸಿ ಕಾರ್ಯಚರಣೆ ಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸಾರಿಗೆ ಅಧಿಕಾರಿಗಳಿಗೆ ತಿಳಿಸಿದರು. (ಕ್ರಮ- ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಡಿ.ಡಿ. ಗಣಿ ಮತ್ತು ಭೂವಿಜ್ಞಾನ ಇಲಾಖೆ & ಬಿ.ಎಂ.ಟಿ.ಸಿ ಡಿ.ಟಿ.ಓ ಮತ್ತು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ನಗರ ಸಭೆ / ಪುರಸಭೆಗಳ ಆಯುಕ್ತರು / ಮುಖ್ಯಾಧಿಕಾರಿಗಳು)

## ಲೋಕೋಪಯೋಗಿ ಇಲಾಖೆ ಸಂಬಂಧಿಸಿದಂತೆ

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಾದು ಹೋಗಿರುವ ನೈಸ್ ರಸ್ತೆಯಲ್ಲಿ ಸಂಭವಿಸುವ ಅಪಘಾತಗಳನ್ನು ತಡೆಯುವ ಸಲುವಾಗಿ ನೈಸ್ ರಸ್ತೆಯಲ್ಲಿ ಸಂಚರಿಸುವ ವಾಹನಗಳ ವೇಗದ ಮಿತಿಯನ್ನು ನಿಗಾವಹಿಸಲು ಬೆಂಗಳೂರು – ಮೈಸೂರು ರಸ್ತೆಯಲ್ಲಿ ಅಳವಡಿಸಿರುವಂತೆ ಎ-ಐ ಕ್ಯಾಮರಾಗಳನ್ನು ಅಳವಡಿಸಲು ನೈಸ್ ರಸ್ತೆಯಲ್ಲಿ 40 ಸ್ಥಳಗಳನ್ನು ಗುರುತಿಸಿದ್ದು, ಈವರೆಗೆ 02 ಸ್ಥಳಗಳಲ್ಲಿ ಎ-ಐ ಕ್ಯಾಮರಾಗಳನ್ನು ಅಳವಡಿಸಲಾಗಿದೆ, ಉಳಿದ ಸ್ಥಳಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಐ-ಮ್ಯಾಸ್ಟ್ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ನೈಸ್ ಸಂಸ್ಥೆಯ ಪ್ರತಿನಿಧಿಗಳು ತಿಳಿಸಿದರು. ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.

ನಿಯಮಗಳಂತೆ ಬೆಂಗಳೂರು ನಗರ ಜಿಲ್ಲೆಯ ರಸ್ತೆಗಳಲ್ಲಿ ಗುರುತಿಸಿರುವ ಹಾಗೂ ಸರಿಪಡಿಸಲಾದ ಬ್ಲಾಕ್ ಸ್ಪಾಟ್‌ಗಳ ವಿವರಗಳನ್ನು ಪೊಲೀಸ್ ಇಲಾಖೆಯಿಂದ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಳೆಗಾಲ ಪ್ರಾರಂಭವಾಗಿದ್ದು, ರಸ್ತೆಗಳಲ್ಲಿ ಉಂಟಾಗುವ ಗುಂಡಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. (ಕ್ರಮ- ಕಾರ್ಯಪಾಲಕ ಅಭಿಯಂತರರು, ಲೋ.ಇ., ಬೆಂಗಳೂರು ವಿಭಾಗ, ಬೆಂಗಳೂರು & ನೈಸ್ ಸಂಸ್ಥೆ ಬೆಂಗಳೂರು)

ಸರ್ಕಾರೇತರ ಸಂಸ್ಥೆಯಾದ Bloomberg Philanthropies Initiative for Global Road Safety ಪ್ರತಿನಿಧಿಗಳಾದ ಅಪರಾಜಿತ ರೇ ರವರು ಮಾತನಾಡುತ್ತಾ, ಹೈರಿಸ್ಕ್ ಕಾರೀಡಾರ್ ಮತ್ತು ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸುವ ಹಾಗೂ ಅವುಗಳನ್ನು ನಿವಾರಿಸಲು ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸಂಸ್ಥೆಯು ಬಿ.ಬಿ.ಎಂ.ಪಿ, ಲೋಕೋಪಯೋಗಿ ಇಲಾಖೆ, ಎನ್.ಹೆಚ್.ಎ.ಐ ಪೊಲೀಸ್ ಇಲಾಖೆ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ವಿವಿಧ ಕೂಡು ರಸ್ತೆಗಳಲ್ಲಿ ಸಾರ್ವಜನಿಕರು ರಸ್ತೆ ದಾಟಲು ಪಾದಚಾರಿ ಮೇಲ್ಸೇತುವೆಗಳು ನಿರ್ಮಿಸಿದ್ದರೂ ಅವುಗಳನ್ನು ಬಳಸಲು ಸಾರ್ವಜನಿಕವಾಗಿ ನಿರಾಸಕ್ತಿ ವ್ಯಕ್ತವಾಗುತ್ತಿದ್ದು, ಸಿಗ್ನಲ್ ಅಳವಡಿಸಿ ರಸ್ತೆ ದಾಟಲು ಪಾದಚಾರಿಗಳಿಗೆ ಎತ್ತರಿಸಿದ ಪಾದಚಾರಿ ಮಾರ್ಗ ಒದಗಿಸುವುದು ಸೂಕ್ತವೆಂದು

ಅಭಿಪ್ರಾಯಿಸಿದರು. ಮುಂದಿನ ಸಭೆಯಲ್ಲಿ ಸಂಸ್ಥೆಯವರು ಕೈಗೊಂಡಿರುವ ಕಾರ್ಯಗಳ ಬಗ್ಗೆ ವರದಿಯನ್ನು ಪ್ರಾತ್ಯಕ್ಷಿಕೆ ನೀಡಲು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ರಸ್ತೆಯ ಬದಿಗಳಲ್ಲಿ ಕಸ ಎಸೆಯುವುದರಿಂದ ರಸ್ತೆ ಬಳಕೆದಾರರಿಗೆ ಅನಾನುಕೂಲವಾಗುತ್ತಿರುವುದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳೆ ಗಮನ ಸೆಳೆದಾಗ, ರಸ್ತೆಯ ಬದಿ ಕಸ ಎಸೆಯುವುದನ್ನು ನಿಯಂತ್ರಿಸಲು ಸಂಬಂಧಿಸಿದ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆ ಅಧಿಕಾರಿಗಳಿಗೆ ಸೂಚನೆ ನೀಡಲು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಶ್ರೀಮತಿ ಕವಿತ ಬಿ.ಎನ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಡಿ.ಸಿ.ಎಲ್ ರವರು ಮಾತನಾಡುತ್ತಾ, ರಸ್ತೆಗಳ ಮೀಡಿಯನ್‌ಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಅನಧಿಕೃತವಾಗಿ ಬೃಹತ್ ಜಾಹಿರಾತು ಫಲಕಗಳನ್ನು ಅಳವಡಿಸುತ್ತಿದ್ದು, ಅವುಗಳು ರಸ್ತೆ ಬಳಕೆದಾರರ ಸುರಕ್ಷತೆಗೆ ಮಾರಕವಾಗುತ್ತಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ರಸ್ತೆಗಳಲ್ಲಿ ಅನಧಿಕೃವಾಗಿ ಅಳವಡಿಸಿರುವ ಬೃಹತ್ ಜಾಹಿರಾತು ಫಲಕಗಳನ್ನು ತೆರವುಗೊಳಿಸಲು ಸಂಬಂಧಿಸಿದ ಗ್ರಾಮ ಪಂಚಾಯಿತಿ, ನಗರ ಸಭೆ, ಪುರ ಸಭೆ ಅಧಿಕಾರಿಗಳಿಗೆ ಸೂಚಿಸಲು ತಿಳಿಸಿದರು.

ಸಿಲ್ಕ್ ಬೋರ್ಡ್ ನಿಂದ ಅತ್ತಿಬೆಲೆ ವರೆಗಿನ 24.50 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಕಾರಿಗಳು ಮಾತನಾಡುತ್ತಾ, ರಸ್ತೆಯಲ್ಲಿ ರಸ್ತೆ ಸುರಕ್ಷತೆಗಾಗಿ ಕೈಗೊಂಡಿರುವ ವಿವಿಧ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ರಸ್ತೆಯ ಮೀಡಿಯನ್‌ನಲ್ಲಿ ಅಳವಡಿಸಿರುವ ಬ್ಯಾರಿಕೇಡಿಂಗ್ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಕೇಳಿದಾಗ ಸಾರ್ವಜನಿಕರು ರಸ್ತೆಯನ್ನು ದಾಟಲು ಪ್ರತಿ ಕಿ.ಮೀಗೆ ಒಂದರಂತೆ ಪಾದಚಾರಿ ಮೇಲ್ಸೇತುವೆ ಅಥವಾ ಕೆಳಸೇತುವೆಯನ್ನು ಒದಗಿಸಿದರೂ ಸಹ ರಸ್ತೆಯ ಮೇಲೆ ದಾಟುವುದನ್ನು ನಿಯಂತ್ರಿಸಲು ರಸ್ತೆಯುದ್ದಕ್ಕೂ ಐದು ಅಡಿ ಎತ್ತರದ ಬ್ಯಾರಿಕೇಡಿಂಗ್ ಅಳವಡಿಸಲಾಗಿದೆ. ಆದರೂ ಕೆಲವು ಕಡೆಗಳಲ್ಲಿ ಯುವಕರು ಬ್ಯಾರಿಕೇಡ್‌ನ್ನು ಹತ್ತಿ ರಸ್ತೆ ದಾಟುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಆದಾಗ್ಯೂ ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿರುವುದು ಕಂಡುಬಂದಿರುತ್ತದೆ. ಸಿ.ಎಸ್.ಆರ್ ಅನುದಾನದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

2024ನೇ ಮಾರ್ಚ್ ನಿಂದ ಈವರೆಗೆ ಜಿಲ್ಲಾ ವ್ಯಾಪ್ತಿಯ ರಸ್ತೆಗಳಲ್ಲಿ ಪೊಲೀಸ್ ಠಾಣೆವಾರು ಸಂಭವಿಸಿರುವ ಅಪಘಾತಗಳು, ಸಾವುಗಳು ಮತ್ತು ಗಾಯಗೊಂಡವರ ವಿವರಗಳನ್ನು ಸಂಬಂಧಿಸಿದ ಇಲಾಖೆಯಿಂದ ಸಂಗ್ರಹಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು. (ಕ್ರಮ– ಕಾರ್ಯಪಾಲಕ ಅಭಿಯಂತರರು, ಲೋ.ಇ., ಬೆಂಗಳೂರು ವಿಭಾಗ, ಬೆಂಗಳೂರು ಮತ್ತು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ನಗರ ಸಭೆ / ಪುರಸಭೆಗಳ ಆಯುಕ್ತರು / ಮುಖ್ಯಾಧಿಕಾರಿಗಳು)

ಮುಂದಿನ ಸಭೆಗೆ ಎಲ್ಲಾ ಸದಸ್ಯ ಅಧಿಕಾರಿಗಳು ಸಭೆಗೆ ಪೂರಕವಾದ ಮಾಹಿತಿಯೊಂದಿಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಿ ಎಲ್ಲರಿಗೂ ವಂದನೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

(ಶ್ರೀ ಆರ್. ಚಂದ್ರಶೇಖರ್, ಕೆ.ಇ.ಎಸ್.)
ಕಾರ್ಯಪಾಲಕ ಅಭಿಯಂತರರು, ಲೋ.ಇ., ಬೆಂಗಳೂರು ವಿಭಾಗ ಮತ್ತು ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ನಗರ ಜಿಲ್ಲೆ ರಸ್ತೆ ಸುರಕ್ಷತಾ ಸಮಿತಿ.

(ಶ್ರೀ ಜಗದೀಶ ಜಿ. ಭಾ.ಆ.ಸೇ)
ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಮತ್ತು ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ ರಸ್ತೆ ಸುರಕ್ಷತಾ ಸಮಿತಿ.